ಓ.ಎಸ್. ನಂಃ **35/2023**<br><u>ಪಿಡಬ್ಲ್ಯೂಃ **2**</u>

ದಿನಾಂಕಃ 17-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ಹೆಚ್ ವಕೀಲರಿಂದಃ</u>

ಸರ್ವೆ ನಂ.37 ರಲ್ಲಿ ಒಟ್ಟು 05 ಎಕರೆ 20 ಗುಂಟೆ ಜಮೀನು ಇದೆ. ಸದರಿ ಒಟ್ಟು ಜಮೀನಿನ ಪೂರ್ವಕ್ಕೆ ಗುಂಡೆ ಮಲ್ಲಪ್ಪ ರವರ ಜಮೀನು, ಪಶ್ಚಿಮಕ್ಕೆ ಭೀಮಪ್ಪ ರವರ ಜಮೀನು, ಉತ್ತರಕ್ಕೆ ಪ್ರತಿವಾದಿಯರ ಜಮೀನು ಹಾಗೂ ದಕ್ಷಿಣಕ್ಕೆ ನಮ್ಮದೇ ಜಮೀನು ಇರುತ್ತದೆ. ನಮ್ಮ ಹಾಗೂ ಪ್ರತಿವಾದಿಯರ ಜಮೀನು ಅಕ್ಕ-ಪಕ್ಕದಲ್ಲಿ ಇವೆ ಎಂದರೆ ಸರಿ.

ಸರ್ವೆ ನಂ.36 ರಲ್ಲಿನ ಜಮೀನು ಪ್ರತಿವಾದಿಯರಿಗೆ ಅವರ ಹಿರಿಯರಿಂದ ಬಂದಿರುತ್ತದೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಜಮೀನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಈಗ ಎರಡು ವರ್ಷಗಳ ಹಿಂದೆ ಪ್ರತಿವಾದಿಯರು ನಮ್ಮ ಜಮೀನು ಸ್ವಾಧೀನಕ್ಕೆ ತೊಂದರೆ ನೀಡಿರುತ್ತಾರೆ. ಪ್ರತಿವಾದಿಯರು ತಮ್ಮ ಜಮೀನು ಹದ್ದುಬಸ್ತ್ ಗುರುತಿಸಲು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಭೂ ಮಾಪನ ಇಲಾಖೆಯವರು ಅವರ ಜಮೀನು ಹದ್ದುಬಸ್ತ್ ಗುರುತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಪ್ರತಿವಾದಿಯರ ಜಮೀನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದು ಭೂ ಮಾಪಕರು ವರದಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ನಮ್ಮ ಜಮೀನಿನ ಸ್ವಾಧೀನದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ನಾವು ಪ್ರತಿವಾದಿಯರ ಒಟ್ಟು 23 ಗುಂಟೆ ಜಮೀನು ಒತ್ತುವರಿ ಮಾಡಿದ್ದೇವು ಎಂದರೆ ಸರಿಯಲ್ಲ. ನಂತರ ನ್ಯಾಯ ಪಂಚಾಯಿತಿ ಮಾಡಿದಾಗ ಸದರಿ ಜಮೀನನ್ನು ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ನಂತರ ನಾವು ಈ ದಾವೆಯಲ್ಲಿ ಏಕಪಕ್ಷಿಯ ಮಧ್ಯಂತರ ತಡೆಯಾಜ್ಞೆ ಪಡೆದುಕೊಂಡು ಮತ್ತೆ ಪ್ರತಿವಾದಿಯರ ಜಮೀನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಜಮೀನು ಸ್ವಾಧೀನಕ್ಕೆ ಯಾವುದೇ ತೊಂದರೆ ನೀಡದಿದ್ದರೂ ಒತ್ತುವರಿ ಜಮೀನನ್ನು ಅವರಿಗೆ ಬಿಟ್ಟು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ